# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 04/10/2021 ರಂದು ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

1. SED:- ದಿನಾಂಕ:03.10.2021 ರಂದು ಬಿದ್ದ ಬಾರಿ ಮಳೆಗೆ ಬೃಹತ್ ನೀರು ಕಾಲುವೆಯಲ್ಲಿ ಮಳೆಯಿಂದಾಗಿ ತುಂಬಿ ಮೇಲೆ ಹರಿದು ಅಕ್ಕ ಪಕ್ಕ ಇರುವ 20 ರಿಂದ 30 ಮನೆಗಳಿಗೆ ನೀರು ನುಗ್ಗಿ ತುಂಬ ತೊಂದರೆಯಾಗಿರುವುದಾಗಿ ನೊಂದ ಸಾರ್ವಜನಿಕರುಗಳು ಸಭೆ ನಡೆಯುವ ಸಮಯದಲ್ಲಿ ಬಂದು ದೂರು ನೀಡಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಬೇಕು ಎಂದು ಒತ್ತಡ ತಂದರು.

   ಕೂಡಲೇ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಜಂಟಿ ತಪಾಸಣೆ ನಡೆಸಿ ಪರಿಹರಿಸುವುದಾಗಿ ದೂರುದಾರರುಗಳಿಗೆ ಹೇಳಿ ಸಮಾಧನ ಪಡಿಸಿ ಕಳುಹಿಸಿದರು.

2. Police:- ದತ್ತಾತ್ರೇಯ ದೇವಾಸ್ಥನ ವಾರ್ಡಿನ ಶೇಷಾದ್ರಿಪುರಂ ಪೋಲಿಸ್ ಮಿತಿಯಲ್ಲಿ ಕೇಲವು ಖಾಸಗಿ ವಾಹನಗಳನ್ನು, ಕಾರುಗಳನ್ನು ಮನೆ ಮುಂದೆ ಅನಧಿಕೃತವಾಗಿ ನಿಲುಗಡೆ ಮಾಡುವುದನ್ನು ಸಂಬಂಧಿಸಿದ ಶೇಷಾದ್ರಿಪುರಂ ಪೋಲಿಸ್ ಇಲಾಖೆಗೆ ತಡೆಗಟ್ಟುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

   ಆಂಜನೇಯ ಬ್ಲಾಕ್ 1ನೇ ಕ್ರಾಸ್‌ನಲ್ಲಿ ಒಂದು ಕಾರು ಸಂಖ್ಯೆ :CKO 5028 ಸಂಖ್ಯೆಯುಳ್ಳ ಕಾರು ಬಹಳ ದಿನಗಳಿಂದ ಇಲ್ಲೇ ನಿಲ್ಲಿಸಲ್ಪಟ್ಟಿದ್ದು, ಅದಕ್ಕೆ ವಾರಸುದರಾರು ಇಲ್ಲದೇ ಇದ್ದು ಇದರಿಂದ ಗಿಡಗಳು ಬೆಳೆದು ಕೊಂಡು ಸೊಳ್ಳೆ, ವಿಷಜಂತುಗಳು ಇದ್ದು ಇದರಿಂದ ಅಲ್ಲೇ ವಾಸವಿರುವ ಸಾರ್ವಜನಿಕರುಗಳಿಗೆ ಭಯ ಮತ್ತು ತೊಂದರೆಯಾಗುತ್ತಿದ್ದು, ಸಂಬಂಧಪಟ್ಟ ಸಂಚಾರಿ ಪೋಲಿಸ್ ಇಲಾಖೆಯವರಿಗೆ ಕ್ರಮ ತೆಗೆದು ಕೊಳ್ಳಬೇಕೆಂದು ಶ್ರೀ.ಶಿವಪ್ರಸಾದ್ ಸದಸ್ಯರು ಸಭೆಯಲ್ಲಿ ಒತ್ತಾಯಿಸಿದರು.

3. BWSSB:- Pipeline 7th cross ನಲ್ಲಿರುವ man hole ಸರಿಪಡಿಸುವಂತೆ ಶ್ರೀಮತಿ ಕಮಲ ಸದಸ್ಯರು ಸಭೆಯಲ್ಲಿ ಒತ್ತಾಯಿಸಿದರು.

4. ELECTRICAL:- 2ನೇ ಮುಖ್ಯ ರಸ್ತೆ ಶೇಷಾದ್ರಿಪುರಂ, ಆಂಜನೇಯ ಬ್ಲಾಕ್, 2nf street, 3rd cross near ,malleshwarm ಮತ್ತು ಪೈಪ್‌ಲೈನ್ ರಸ್ತೆಯಲ್ಲಿ ಬೀದಿ ದೀಪಗಳಿಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ

ಸಂಬಂಧಪಟ್ಟ ಇಂಜಿನಿಯರ್ ಶ್ರೀ.ಪಾಷಾ ರವರಿಗೆ ಕ್ರಮ ತೆಗೆದು ಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತ್ತು.

5. Police:- 3ನೇ ಕ್ರಾಸ್ Kiran dry cleaners ಹತ್ತಿರ, bhhavana ರಸ್ತೆಯಲ್ಲಿ ಮತ್ತು ಆಂಜನೇಯ ಬ್ಲಾಕ್ ಮಾರುತಿ ಆಸ್ಪತ್ರೆ, 2nd street conservancy ಪಕ್ಕದಲ್ಲಿ ಕೆಲವು ಪೋಲಿ ಪುಂಡರುಗಳು ಗಾಂಜಾ, ಮದ್ಯಪಾನ ಮಾಡತ್ತದ್ದು ಇದ್ದರಿಂದ ಸಾರ್ವಜನಿಕರಿಗೆ ತುಂಬ ತೊಂದರೆಯಾಗುತ್ತಿದ್ದು, ಶೇಷಾದ್ರಿಪುರಂ ಪೋಲಿಸ್‌ನವರಿಗೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ಎಲ್ಲಾ ಸದಸ್ಯರುಗಳು ಸಭೆಯಲ್ಲಿ ಒತ್ತಡ ಮಾಡಿದರು.

6. Health Dept:- ವಾರ್ಡಿನ ಕೆಲವು ರಸ್ತೆಗಳಿಗೆ ಸರಿಯಾದ ರೀತಿಯಲ್ಲಿ ರಸ್ತೆಗೆ ಪಿ.ಕೆಗಳು ಬರುವುದಿಲ್ಲ ಎಂದು ಸಭೆಯಲ್ಲಿ ಎಲ್ಲಾ ಸದಸ್ಯರುಗಳು ದೂರು ನೀಡಿದ ಮೇರೆಗೆ ಸಂಬಂಧಪಟ್ಟ ಜೆ.ಹೆಚ್ ನವರಿಗೆ ಕ್ರಮ ತೆಗೆದು ಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

7. Engineering: : Pipe Line 5th and 8th cross ನಲ್ಲಿ desilting ಮಾಡಿ ರಸ್ತೆಯಲ್ಲಿ ಹರಿಯುವ ನೀರು ಚರಂಡಿಯಲ್ಲಿ ಹೋಗುವಂತೆ, ಡೆಬ್ರಿಸ್ Clear ಮಾಡುವಂತೆಯು ಹಾಗೂ ರಸ್ತೆಯಲ್ಲಿ ಬಿದ್ದರಿರುವ ಗುಂಡಿಗಳಿಗೆ ಟಾರ್ ಪ್ಯಾಚ್ ಮಾಡಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಮುಕ್ತಾಯ ಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ
ವಾರ್ಡ್

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.